**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು**

**ಪತ್ರಿಕಾ ಪ್ರಕಟಣೆ**

ವಿಷಯ:- ನಿಗಮದ ಚಾಲಕ/ನಿರ್ವಾಹಕರಿಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಿಂದ (Oral Cancer) ಬಾಯಿ ಮತ್ತು ಗಂಟಲು ಕ್ಯಾನ್ಸರ್ ತಪಾಸಣಾ ಕಾರ್ಯಕ್ರಮ.

*************

ದಿನಾಂಕ 06/01/2020 ರಂದು ಕೆಎಸ್ಆರ್‌ಟಿಸಿ ಕೇಂದ್ರ ಕಛೇರಿಯಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಿಂದ, ನಿಗಮದ 17 ವಿಭಾಗಗಳ ಸುಮಾರು 150 ಚಾಲಕ/ನಿರ್ವಾಹಕರಿಗೆ (Oral cancer) ಬಾಯಿ ಮತ್ತು ಗಂಟಲು ತಪಾಸಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸದರಿ ಕಾರ್ಯಕ್ರಮವನ್ನು ಶ್ರೀ.ಶಿವಯೋಗಿ.ಸಿ.ಕಳಸದ, ಭಾ.ಆಸೇ, ವ್ಯವಸ್ಥಾಪಕ ನಿರ್ದೇಶಕರು ಕೆಎಸ್ಆರ್‌ಟಿಸಿ ರವರು ಉದ್ಘಾಟಿಸಿದರು. ವ್ಯವಸ್ಥಾಪಕ ನಿರ್ದೇಶಕರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ, ನಿಗಮದ ಸಿಬ್ಬಂದಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯ ಸಂಸ್ಥೆಯ ಅಡಿಪಾಯವಾಗಿರುತ್ತದೆ. ಸಿಬ್ಬಂದಿಗಳು ಆರೋಗ್ಯವಾಗಿದ್ದಲ್ಲಿ, ಇನ್ನು ಹೆಚ್ಚಿನ ದಕ್ಷತೆಯಿಂದ ಕೆಲಸ ನಿರ್ವಹಿಸಬಹುದು. ಸಿಬ್ಬಂದಿಗಳ ಆರೋಗ್ಯ ಅವರ ಕುಟುಂಬದ ಮೇಲೆ ಪರಿಣಾಮ ಬೀರುತ್ತದೆ. ಚಾಲಕ ನಿರ್ವಾಹಕರು ತಮ್ಮ ಹೆಚ್ಚಿನ ಸಮಯವನ್ನು ಮಾರ್ಗಗಳಲ್ಲಿ ಕರ್ತವ್ಯ ನಿರ್ವಹಿಸಲು ತೊಡಗಿಸಿಕೋಲುವುದರಿಂದ ತಮ್ಮಗಳ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ವಹಿಸುವುದಿಲ್ಲ. ಸಿಬ್ಬಂದಿಗಳು ಗುಟ್ಕಾ, ತಂಬಾಕು ಸೇವೆನೆಯನ್ನು ಬಿಡಬೇಕು. ಆರೋಗ್ಯದ ಕಡೆ ಗಮನವಹಿಸಬೇಕು.

ಆದ್ದರಿಂದ ನಿಗಮವು ಇತ್ತೀಚಿನ ದಿನಗಳಲ್ಲಿ ಹೆಚ್ಚೆಚ್ಚು ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ, ಸಿಬ್ಬಂದಿಗಳಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಹಾಗೂ ಮುಂಜಾಗ್ರತೆ ಮೂಡಿಸುವ ಕಾರ್ಯಕ್ರಮವನ್ನು ನಿರಂತರವಾಗಿ ಮಾಡುತ್ತಿದೆ. ಹೃದಯ, ಕಣ್ಣು, ಹಲವು ಮಾದರಿಯ ಕ್ಯಾನ್ಸರ್, stress management, ನಿವೃತ್ತಿ ಪೂರ್ವ ಕಾರ್ಯಾಗಾರಗಳನ್ನು ಅಧಿಕ ಸಂಖ್ಯೆಯಲ್ಲಿ ಮಾಡಲು ಈಗಾಗಲೇ ಸೂಚನೆ ನೀಡಲಾಗಿದೆ. ಇಂದಿನ ಈ ಶಿಬಿರಕ್ಕೆ ಹಾಜರಾಗಿರುವ ಸಿಬ್ಬಂದಿಗಳು ತಮ್ಮ ಸಹೋದ್ಯೋಗಿಗಳಿಗೆ ಕೂಡ ಈ ಬಗ್ಗೆ ತಿಳಿಸಿ ಜಾಗೃತಿ ಮೂಡಿಸುವುದು ಅವಶ್ಯಕವಾಗಿರುತ್ತದೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯವರು ನಿಗಮದ ಪ್ರತಿಯೊಂದು ಕಾರ್ಯಕ್ರಮಕ್ಕೂ ಸೂಕ್ತ ರೀತಿ ಸ್ಪಂದಿಸುತ್ತಾ ನೆರವು ನೀಡುತ್ತಿದ್ದು, ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಆರೋಗ್ಯಕರ ಸಿಬ್ಬಂದಿ- ಆರೋಗ್ಯಕರ ಸಂಸ್ಥೆಯಾಗಿ ರೂಪುಗೊಳ್ಳಬೇಕೆಂಬುದು ನಮ್ಮ ಆಶಯ ಎಂದು ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀಮತಿ. ಕವಿತಾ ಎಸ್. ಮನ್ನಿಕೇರಿ ಭಾ.ಆಸೇ, ನಿರ್ದೇಶಕರು (ಸಿಬ್ಬಂದಿ & ಪರಿಸರ), ಕೆಎಸ್‌ಆರ್‌ಟಿಸಿ, ಡಾ ಚವ್ಹಾಣ್, ಪ್ರೊಫೆಸರ್, ಮುಖ್ಯಸ್ಥರು, Oral cancer, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಶ್ರೀ.ವಿಜಯಕುಮಾರ್ ರೈ, ಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ, ಶ್ರೀ.ಪ್ರಭಾಕರ ರೆಡ್ಡಿ, ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಡಾ. ರಾಮಮೂರ್ತಿ ಕೆ, ಮುಖ್ಯ ಯಾಂತ್ರಿಕ ಅಭಿಯಂತರರು (ನಿ), ಶ್ರೀ. ಲಿಂಗರಾಜು ಜಿ. ಮುಖ್ಯ ಭದ್ರತಾ ಜಾಗೃತಾಧಿಕಾರಿಗಳು ಉಪಸ್ಥಿತರಿದ್ದರು.

**ಸಹಿ/-**

**ಸಾರ್ವಜನಿಕ ಸಂಪರ್ಕಾಧಿಕಾರಿ**


ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
ಮತ್ತು
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
ನಿಗಮದ ಚಾಲಕರು ಮತ್ತು ನಿರ್ವಾಹಕರಿಗೆ
ಉಚಿತ ಕ್ಯಾನ್ಸರ್
ತಪಾಸಣಾ ಕಾರ್ಯಕ್ರಮ




ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ